**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ ಇವರು ನಿಯಮ 330 ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

ಸಿಂಧನೂರು ತಾಲ್ಲೂಕಿನ ಧಾರ್ಮಿಕ ಪ್ರಸಿದ್ಧವಾದ 600 ವರ್ಷಗಳ ಧಾರ್ಮಿಕ ಇತಿಹಾಸವುಳ್ಳ, ಶಕ್ತಿಪೀಠ & ದೇವಿಯ ಪುರಾಣವನ್ನು ರಚಿಸಲ್ಪಟ್ಟಿರುವ ಶ್ರೀ ಕ್ಷೇತ್ರ ಅಂಬಾಮಠದ ಗರ್ಭಗುಡಿಯ & ಸಭಾಂಗಣದ ಶಿಲಾಕಟ್ಟಡಕ್ಕಾಗಿ ಧಾರ್ಮಿಕ ದತ್ತಿ ಇಲಾಖೆಯಿಂದ ಸುಮಾರು ರೂ.07.00 ಕೋಟಿ ಹಣ ಹಾಗೂ ನನ್ನ ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ರೂ.80.00 ಲಕ್ಷ ರೂಪಾಯಿ ಹಣ ಬಿಡುಗಡೆಗೊಳಿಸಲಾಗಿದ್ದು, ಸದರಿ ಇತಿಹಾಸ ಪ್ರಸಿದ್ಧ ಧಾರ್ಮಿಕ ಕ್ಷೇತ್ರದ ಶ್ರೀಚಕ್ರ ಸ್ಥಾಪಿತ ಶ್ರೀದೇವಿಯ ಗರ್ಭಗುಡಿ ಹಾಗೂ ಸುಖಾಸೀನವನ್ನು ಧರ್ಮ ಗುರುಗಳು ಹಾಗೂ ಹಿರಿಯರೊಂದಿಗೆ ಸಮಾಲೋಚನೆಯನ್ನು ಮಾಡಿ, ಧಾರ್ಮಿಕ ನಕ್ಷೆಯಂತೆ ನಿರ್ಮಿಸಬೇಕಾಗಿರುವುದು ಸರ್ಕಾರದ ಹಾಗೂ ಸ್ಥಳೀಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಆದರೆ ಧರ್ಮ ಗುರುಗಳು ಹಾಗೂ ಹಿರಿಯರೊಂದಿಗೆ ಸಮಾಲೋಚನೆಯನ್ನು ಮಾಡದೇ ತರಾತುರಿಯಲ್ಲಿ ಎತ್ತರವಾಗಿ ನಿರ್ಮಿಸಬೇಕು ಎನ್ನುವ ಬೇಜವಾಬ್ದಾರಿ ಆಲೋಚನೆಯೊಂದಿಗೆ ಈಗಾಗಲೇ ರೂ.4.20 ಕೋಟಿಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲಾಗಿದ್ದ ಒಂಬತ್ತು ಅಡಿ ಕಟ್ಟಡದಲ್ಲಿ 04 ಅಡಿ ಕಟ್ಟಡವನ್ನು ನೆಲಸಮಗೊಳಿಸಿ ಸರ್ಕಾರದ ಹಣವನ್ನು ಪೂರ್ವ ವಿವೇಚನೆಯಿಲ್ಲದೆ ಪೋಲು ಮಾಡಿರುವುದು ಹಾಗೂ ಉಳಿದಿರುವ ಅಲ್ಪ ಅನುದಾನದಲ್ಲಿಯೇ ಗುಡಿಯನ್ನು ನಿರ್ಮಾಣ ಮಾಡಬೇಕಾಗಿರುವ ಸಂದಿಗ್ಧ ಪರಿಸ್ಥಿತಿ ನಿರ್ಮಾಣವಾಗಿದೆ.

ಇಂತಹ ಬೇಜವಾಬ್ದಾರಿತನದಿಂದ ಕಾರ್ಯನಿರ್ವಹಿಸಿದ, ಪೂರ್ವಪರ ಯೋಜನೆಯಿಲ್ಲದೆ ದೇವಸ್ಥಾನದ ಪವಿತ್ರತೆಗೆ ಧಕ್ಕೆಯುಂಟು ಮಾಡಿ, ಲಕ್ಷಾಂತರ ಭಕ್ತರ ನಂಬಿಕೆಗೆ ಗಾಸಿಯನ್ನುಂಟುಮಾಡುವ ರೀತಿಯಲ್ಲಿ ಕಟ್ಟಡವನ್ನು ನಿರ್ಮಾಣ ಮಾಡುತ್ತಿರುವ ಕುರಿತು ಧಾರ್ಮಿಕ ದತ್ತಿ ಇಲಾಖೆಯಿಂದ ಸೂಕ್ತ ತನಿಖೆಯನ್ನು ಮಾಡಿಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಹಾಗೂ ಶ್ರೀಕ್ಷೇತ್ರದ ಕಟ್ಟಡವನ್ನು ಸುವ್ಯವಸ್ಥಿತವಾಗಿ ನಿರ್ಮಾಣ ಮಾಡಲು ಹೆಚ್ಚಿನ ರೂ.5.00 ಕೋಟಿಗಳ ಅನುದಾನವನ್ನು ಬಿಡುಗಡೆಗೊಳಿಸಬೇಕೆಂಬುದರ ಕುರಿತು ನಿಯಮ 330ರ ಅಡಿಯಲ್ಲಿ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಗಮನ ಸೆಳೆದಿರುತ್ತಾರೆ.

**ಉತ್ತರ:-**

ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕು ಸೋಮಲಾಪುರ ಗ್ರಾಮದ ಶ್ರೀ ಅಂಬಾದೇವಿ ದೇವಸ್ಥಾನವು ಧಾರ್ಮಿಕ ದತ್ತಿ ಇಲಾಖಾ ಆಡಳಿತಕ್ಕೆ ಒಳಪಡುವ ಪ್ರವರ್ಗ "ಎ" ಅಧಿಸೂಚಿತ ಸಂಸ್ಥೆಯಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಕಂಇ 07 ಮುಲಕಾ 2021, ದಿನಾಂಕ:08.11.2021ರಲ್ಲಿ ಈ ದೇವಾಲಯದ ಗರ್ಭಗುಡಿಯ ಹಾಗೂ ಹೊರ ಪ್ರಾಂಗಣ ಸುತ್ತಲೂ ಹೊಸದಾಗಿ ಕಲ್ಲಿನ ಶಿಲಾ ಮಂಟಪ ನಿರ್ಮಾಣ ಮಾಡುವ ಕಾಮಗಾರಿಯ ರೂ.793.50 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುತ್ತದೆ. ಅಂದಾಜುಪಟ್ಟಿಯ ಮೊತ್ತದಲ್ಲಿ ರೂ.300.00 ಲಕ್ಷಗಳನ್ನು ದೇವಾಲಯದ ನಿಧಿಯಿಂದ ಮತ್ತು ರೂ.439.50 ಲಕ್ಷಗಳನ್ನು ಸಾರ್ವಜನಿಕ ವಂತಿಗೆಯಿಂದ ಭರಿಸಲು ಅನುಮತಿ ನೀಡಲಾಗಿರುತ್ತದೆ.

ಸರ್ಕಾರದ ದಿನಾಂಕ:08.11.2021ರ ಆದೇಶದಂತೆ ಶ್ರೀ ಅಂಬಾದೇವಿ ದೇವಸ್ಥಾನದಲ್ಲಿ ಗರ್ಭಗುಡಿಯ ಹಾಗೂ ಹೊರ ಪ್ರಾಂಗಣ ಸುತ್ತಲೂ ಹೊಸದಾಗಿ ಕಲ್ಲಿನ ಶಿಲಾ ಮಂಟಪ ನಿರ್ಮಾಣದ ಮೊದಲನೇ ಹಂತದ ಕಾಮಗಾರಿಗಾಗಿ, ದೇವಾಲಯದ ನಿಧಿಯಿಂದ ರೂ.275.00 ಲಕ್ಷಗಳನ್ನು ಕ್ಯಾಷ್ಯುಟೆಕ್ ನಿರ್ಮಿತಿ ಕೇಂದ್ರ ರಾಯಚೂರು ರವರಿಗೆ ಬಿಡುಗಡೆ ಮಾಡಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಸದರಿ ಕಾಮಗಾರಿಗಳು ಪ್ರಗತಿಯಲ್ಲಿರುವಾಗ ದೇವಾಲಯದಲ್ಲಿರುವ ಶ್ರೀಚಕ್ರವನ್ನು ಸ್ಥಳಾಂತರಗೊಳಿಸುವ ವಿಷಯಕ್ಕೆ ಸಂಬಂಧಿಸಿದಂತೆ ಅರ್ಚಕರ ಕೋರಿಕೆಯ ಮೇರೆಗೆ ಹಾಗೂ ಧಾರ್ಮಿಕ ಪರಿಷತ್ ಸದಸ್ಯರ ಮಾರ್ಗದರ್ಶನದಲ್ಲಿ ಸ್ವರ್ಣಪ್ರಶ್ನೆಯನ್ನು ಕೇಳಲಾಗಿ ಅಲ್ಲಿ ಸ್ಥಳಾಂತರ ಮಾಡಬಾರದೆಂದು ಬಂದಾಗ ವಿನ್ಯಾಸದಲ್ಲಿ ಕೊಂಚ ಬದಲಾವಣೆ ಮಾಡಲಾಗಿದ್ದು, ಕ್ಯಾಷ್ಯುಟೆಕ್ ಇಂಜಿನಿಯರಿಂಗ್ ಇವರ ಸಮಕ್ಷಮದಲ್ಲಿ ಮಾಡಲಾಗಿ ಯಾವುದೇ ರೀತಿಯ ಉದ್ದೇಶ ಪೂರ್ವಕವಾಗಿ ಯಾವುದೇ ಹಾನಿ ಸಂಭವಿಸಿರುವುದಿಲ್ಲವೆಂದು ಅಪರ ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ರವರು ವರದಿ ಮಾಡಿರುತ್ತಾರೆ.

ಶ್ರೀಕ್ಷೇತ್ರದ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ ಅನುದಾನ ಕೋರಿ ಪ್ರಸ್ತಾವನೆ ಸ್ವೀಕೃತವಾದಲ್ಲಿ, ಆಯವ್ಯಯದಲ್ಲಿ ಲಭ್ಯತೆಗನುಗುಣವಾಗಿ ಪರಿಶೀಲಿಸಬೇಕಾಗಿರುತ್ತದೆ.

ಸಂಖ್ಯೆ:ಕಂಇ 224 ಮುಸಪು 2025

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು